ದಿನಾಂಕಃ **16.07.2026** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು**.**

ಪಾಟೀ ಸವಾಲುಃ ಶ್ರೀ ಕೆ ಎ ವಕೀಲರಿಂದಃ-

ನಾನು ಮೂಲತಃ ಬಾಣಾವರ ಹೋಬಳಿ ಬೈರಗೊಂಡನಹಳ್ಳಿ ಗ್ರಾಮದ ವಾಸಿ. ನಾನು ವ್ಯವಸಾಯ, ಬೇಕರಿ ಉದ್ಯಮ ಮತ್ತು ಟಮೋಟೋ ವ್ಯಾಪಾರ ಮಾಡುತ್ತೇನೆ. ಬೇಕರಿ ಎಲ್ಲಿ ಇದೆ ಎಂಬ ಪ್ರಶ್ನೆಗೆ ಸಾಕ್ಷಿ 2016 ರಲ್ಲಿ ಕಡೂರಿನಲ್ಲಿ ಬೇಕರಿ ಇತ್ತು ಅದನ್ನು ಮಾರಾಟ ಮಾಡಿರುತ್ತೇನೆ. 2015 ರಲ್ಲಿ ಬೇಕರಿಯನ್ನು ಪ್ರಾರಂಭ ಮಾಡಿದ್ದೆ. ಆ ಸಮಯದಲ್ಲಿ ನಾನು ಕಡೂರಿನಲ್ಲಿ ವಾಸವಾಗಿದ್ದೆ. 2015 ರ ಪೂರ್ವದಲ್ಲಿ ನಾನು ವ್ಯವಸಾಯ ಮಾಡುತ್ತಿದ್ದೆ. ಜಮೀನುಗಳು ನನ್ನ ಹೆಸರಿನಲ್ಲಿತ್ತು ಅವುಗಳನ್ನು ಈಗ ಮಾರಾಟ ಮಾಡಿದ್ದೇನೆ. 2014-15 ರಲ್ಲಿ ಜಮೀನುಗಳನ್ನು ಮಾರಾಟ ಮಾಡಿರುತ್ತೇನೆ. ಶಶಿಧರ್ ರವರ ಪರಿಚಯ ನನಗೆ ಇರುತ್ತದೆ. ಅವರು ನನಗೆ 2010 ರಿಂದ ಪರಿಚಯ. ಅವರು ಮತಿಘಟ್ಟದ ಹತ್ತಿರ ಕವಳಿಪುರದ ನಿವಾಸಿ. ನಾನು ಮತ್ತು ಶಶಿಧರ್ ರವರು ಸ್ನೇಹಿತರು ಎಂದರೆ ಸರಿ. ಶಶಿಧರ್ ರವರು ಕೆ ಎಸ್ ಆರ್ ಟಿ ಸಿ ಯಲ್ಲಿ ನಿರ್ವಾಹಕರಾಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಶಶಿಧರ್ ಮತ್ತು ನನ್ನ ನಡುವೆ ಹಣಕಾಸಿನ ವ್ಯವಹಾರ ಇತ್ತು. ಯಾವ ರೀತಿ ವ್ಯವಹಾರ ಎಂಬ ಪ್ರಶ್ನೆಗೆ ಸಾಕ್ಷಿ ನಾನು ಅವರಿಗೆ ರೂ. 5.00 ಲಕ್ಷ ಸಾಲವಾಗಿ ನೀಡಿದ್ದೆ ಎಂದು ನುಡಿಯುತ್ತಾರೆ. ನನ್ನ ಮತ್ತು ಶಶಿಧರ್ ರವರ ನಡುವೆ ಹಣಕಾಸಿನ ವ್ಯವಹಾರ ಇದ್ದ ಕಾರಣ ವಿಶ್ವಾಸದಿಂದ ಇದ್ದೆವು ಎಂದರೆ ಸರಿ.

ಆರೋಪಿ ನಿಮಗೆ ಹೇಗೆ ಪರಿಚಯ ಎಂದರೆ ಸಾಕ್ಷಿ ಅವರು ಶಶಿಧರ್ ರವರ ಹೆಂಡತಿ ಎಂದು ನುಡಿಯುತ್ತಾರೆ. ಆರೋಪಿಯು ನನಗೆ 2013 ರಿಂದ ಪರಿಚಯ. ಆರೋಪಿ ಎಲ್ಲಿ ವಾಸವಾಗಿದ್ದರು ಎಂದರೆ ಸಾಕ್ಷಿ ಈ ಮೊದಲು ಅರಸೀಕೆರೆಯಲ್ಲಿ ವಾಸವಾಗಿದ್ದರು ನಂತರ ಕಡೂರಿಗೆ ಬಂದಿರುತ್ತಾರೆ ಎಂದು ನುಡಿಯುತ್ತಾರೆ. 2010 ರಿಂದ 2015 ರವರೆಗೂ ಆರೋಪಿ ಮತ್ತು ಅವರ ಗಂಡ ಅರಸೀಕೆರೆಯಲ್ಲಿ ವಾಸವಾಗಿದ್ದರು ಎಂದರೆ ಸರಿ. ನಂತರ 2015 ರಿಂದ 2018 ರವರೆಗೂ ಅವರು ಕಡೂರಿನಲ್ಲಿ ಭೋಗ್ಯಕ್ಕೆ ಮನೆ ಮಾಡಿಕೊಂಡು ವಾಸವಾಗಿದ್ದರು ಎಂದರೆ ಸರಿ. ಶಶಿಧರ್ ರವರಿಗೆ ಈ ಹಿಂದೆಯೂ ಸಹ ಹಲವಾರು ಬಾರಿ ಸಣ್ಣ ಪುಟ್ಟ ಹಣ ನೀಡಿದ್ದೆ ಹೆಚ್ಚಿನ ಮೊತ್ತವನ್ನು ಒಂದೇ ಬಾರಿ ನೀಡಿದ್ದೆ. ಆ ರೀತಿ ಹಣಕಾಸಿನ ವ್ಯವಹಾರ ಮಾಡುವಾಗ ಚೆಕ್ಕನ್ನು ಕೊಡುವುದು ಮಾಡುತ್ತಿದ್ದರು ಎಂದರೆ ಸಾಕ್ಷಿ 2016 ರಲ್ಲಿ ಚೆಕ್ಕುಗಳನ್ನು ನೀಡಿದ್ದರು ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಶಶಿಧರ್ ರವರ ಖಾತೆಗೆ ಸೇರಿದ್ದ ಒಂದು ಚೆಕ್ಕನ್ನು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ನಾನು ರೂ. 5.00 ಲಕ್ಷ ಹಣವನ್ನು ಸಾಲ ನೀಡಿದ್ದೆ. ಚೆಕ್ಕನ್ನು ರೂ. 4,75,000 ಗಳಿಗೆ ನೀಡಿದ್ದರು. ಸದರಿ ಚೆಕ್ಕು ಎಸ್ ಬಿ ಐ ಬ್ಯಾಂಕಿಗೆ ಸೇರಿತ್ತು. ಆ ಹಣವನ್ನು ಶಶಿಧರ್ ರವರು ಹಿಂದಿರುಗಿಸಿರಲಿಲ್ಲ ಚೆಕ್ಕು ಖಾತೆಯಲ್ಲಿ ಸಾಕಷ್ಟು ಹಣ ಇಲ್ಲಾ ಎಂಬ ಕಾರಣಕ್ಕೆ ಹಿಂದಿರುಗಿರುತ್ತದೆ. ಸದರಿ ಚೆಕ್ಕನ್ನು 2016 ರಲ್ಲಿ ನಗದೀಕರಣಕ್ಕಾಗಿ ಹಾಜರುಪಡಿಸಿದ್ದೆ. ಆ

ಸಮಯದಲ್ಲಿ ಚೆಕ್ ಅಮಾನ್ಯಗೊಂಡ ನಂತರ ಹಣವನ್ನು ವಾಪಸ್ಸು ನೀಡುವಂತೆ ಶಶಿಧರ್ ರವರಲ್ಲಿ ಅರಸೀಕೆರೆಯಲ್ಲಿ ಕೇಳಿದ್ದೆ, ಆ ಸಮಯದಲ್ಲಿ ಅವರು ಕಡೂರಿನಲ್ಲಿ ವಾಸವಾಗಿದ್ದರು. ಈ ವಿಚಾರವು ಆರೋಪಿಗೆ ತಿಳಿದಿತ್ತು. ಈ ವಿಚಾರವನ್ನು ಶಶಿಧರ್ ರವರು ಆರೋಪಿಗೆ ತಿಳಿಸಿರುತ್ತಾರೆ. ಶಶಿಧರ್ ರವರ ವಿರುದ್ದ ನಾನು ವಕೀಲರ ಮೂಲಕ ನೋಟಿಸು ಜಾರಿ ಮಾಡಿ ಕಾನೂನು ಕ್ರಮ ಕೈಗೊಂಡಿರುತ್ತೇನೆ ದಿನಾಂಕ ನೆನಪಿಲ್ಲ. ಅವರ ವಿರುದ್ದ ನ್ಯಾಯಾಲಯದಲ್ಲಿ ದೂರು ದಾಖಲಿಸಿದ್ದೆ. ಸದರಿ ಪ್ರಕರಣದ ಸಂಖ್ಯೆ ಸಿಸಿ 3789ಃ2016 ಹಿರಿಯ ಸಿವಿಲ್ ನ್ಯಾಯಲಯ, ಅರಸೀಕೆರೆಯಲ್ಲಿ ನಡೆದಿತ್ತು. ಈ ದೂರಿನಲ್ಲಿ ಈ ಹಿಂದೆ ಆರೋಪಿಯ ಗಂಡ ಶಶಿಧರ್ ರವರ ವಿರುದ್ದ ನೀಡಿದ್ದ ದೂರಿನ ಬಗ್ಗೆ ಮಾಹಿತಿ ತಿಳಿಸಿರುವುದಿಲ್ಲ.

**(** ಮುಂದುವರೆದ ಪಾಟೀ ಸವಾಲಿಗಾಗಿ ಸಮಯಕೋರಿದ್ದರಿಂದ ಮುಂದೂಡಲಾಯಿತು **)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ

Sd/-

**3** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.